Regd No M 1299 SATYAVADI Founded 1917
The Oldest Newspaper of Mysore

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 31 ಸಂಚಿಕೆ 21[illegible] ಶುಕ್ರವಾರ 6—8—48 [ಬಿಡಿ ಪ್ರತಿ 3 ಪೈ

ಮಾರಿಷಸ್ ದ್ವೀಪ

.... ಭಾರತಕ್ಕೆ ಸೇರಬೇಕು ....

ಗತ ಧರ್ಮರತ್ನಾಕರರ ಗುಣಗಾನ

ರು, ಆ 5 — ಶ್ರೀ ಪಾಲ
ತಾರಾಮಯ್ಯನವರ ಅಧ್ಯಕ್ಷ
ಈ ದಿನ ಮಧ್ಯಾಹ್ನ ಸಮಾ
ಶಗೊಂಡಿದ್ದ ಮುಂದುವರಿದ ಪೌರ
ಸಭೆಯ ಸಾಧಾರಣ ಅಧಿವೇಶನದಲ್ಲಿ
ಧರ್ಮರತ್ನಾಕರ ಶ್ರೀ ಸಿ. ಪೆರುಮಾಳ್
ಚೆಟ್ಟ್ಯರ ಅಕಾಲ ನಿಧನದ ಬಗ್ಗೆ ಸಂತಾ
ಪ ಸೂಚಕ ನಿರ್ಣಯವಾಯಿತು.

ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಬಿ ನಾರಾಯಣಸ್ವಾಮಿಯವರು ಪೌರಸಭೆಯ ಮಾಜೀ ಸದಸ್ಯರಾದ ಧರ್ಮರತ್ನಾಕರ ಶ್ರೀ ಚೆಟ್ಟ್ಯರ ನಿಧನಕ್ಕೆ ಬಗ್ಗೆ ಸಂತಾಪ ಸೂಚಕ ನಿರ್ಣಯವನ್ನು ಮಂಡಿಸಿದರು.

ಶ್ರೀ ಎ. ವೆಂಕಟೇಶಯ್ಯನವರು ನಿರ್ಣಯವನ್ನು ಅನುಮೋದಿಸುತ್ತಾ ದೀರ್ಘವಾದ ಭಾಷಣ ಮಾಡಿದರು.

ಶ್ರೀಗಳಾದ ಎಫ್. ಸಿ. ದೇವರಾಜೆ ಅರಸ್, ಇ. ಪಿ. ನಂಜಪ್ಪ, ಎಂ. ಶಂಕರಯ್ಯ, ಮಿರ್ಜಾನೂರ್ ಹುಸೇನ್, ಅಗರಂ ರಂಗಯ್ಯ, ಪಿ. ಗೋಪಾಲ ಕೃಷ್ಣ ಶೆಟ್ಟಿ, ಎಸ್. ಸಿದ್ಧಯ್ಯ, ಅಧ್ಯಕ್ಷರು ಮತ್ತು ಮುನಿಸಿಪಲ್ ಕಮಿಷನರ ಧರ್ಮರತ್ನಾಕರರ ಗುಣಗಾನ ಮಾಡಿದರು.

ಮೃತರ ಆತ್ಮಕ್ಕೆ ಶಾಂತಿ ಕೋರುವ ಉದ್ದೇಶವಾಗಿ ಸಭೆ ಎಂಡು ನಿಮಿಷಗಳ ಕಾಲ ಮೌನದಿಂದ ಎದ್ದು ನಿಂತಿತ್ತು.

ಮೃತರ ಗೌರವಾರ್ಥ ಸಭೆ ನಾಳೆ ಮಧ್ಯಾಹ್ನ ವಸ ಬೆಳಿಗ್ಗೆ 8-30 ಗಂಟೆಗೆ ಮುಂದೂಡಲ್ಪಟ್ಟಿರಯಿತು.

ವೃಡ್ ಲ್ಯಾಂಡ್ಸ್
ಚಂಜ್ ಹಬ್ಬದ ಪ್ರಯುಕ್ತ
6—8—48 ರಿಂದ
ಲಿತ ಪವಾರ್, ನಾಯಂಪಳ್ಳಿ
ಡ್, ಸತ್ಯಪಾಲ್ ನಟಿಸಿರುವ
ನತ Janata
ರು ಸಂಸ್ಥಾನದಲ್ಲೆ ಪ್ರಥಮ
ನ – ಅತ್ಯಮೋಘ ಹಿಂದಿ ಚಿತ್ರ
ಪ್ರತಿದಿನ 3 ಆಟಗಳು
— ಬೇಗನೆ ಪ್ರದರ್ಶಿಸಲ್ಪಡುತ್ತದೆ —
ಅತ್ಯದ್ಭುತ ಜನಪ್ರಿಯ ಚಿತ್ರ
ನಾವು ಇಬರು
ಬ

ಮಂಡ್ಯದ ಬಳಿ ಭಾರಿ ಮಳೆಯಿಂದ ಕೆರೆ ಒಡೆದು ಮಂಡ್ಯದ ಊರಿನ ಹಿಂಭಾಗಕ್ಕೆ ನೀರು ನುಗ್ಗಿ, ತಕ್ಷಣ ಊರು ಕೇರಿಗಳೊಳಗೆ ಸಾವಿರಾರು ಹಾವುಗಳು ಸೇರಿ ಜನ ಭೀತರಾಗಿದ್ದಾರೆ

ಸರ್ದಾರ್ ಪಟೇಲ್ ಮತ್ತು ಪಂ॥ ನೆಹರು ಭಾವಚಿತ್ರಗಳನ್ನು ಹೈದರಾಬಾದ್ ಮತ್ತು ಔರಂಗಾಬಾದ್ ಜಿಲ್ಲೆಗಳ ಅಂಗಡಿಗಳಲ್ಲಿ ಬಲಾತ್ಕಾರದಿಂದ ಕಿತ್ತುಹಾಕಲಾಯಿತು.

ಹೈದರಾಬಾದ್ ನಿಜಾಂ ಸೈನಿಕರು ಸರ್ವಂ ಸನ್ನದ್ಧರಾಗಿದ್ದಾರೆ ಎಂದು ಹೈದರಾಬಾದ್ ಕಾಂಗ್ರೆಸ್ ಕಚೇರಿಗೆ ಖಚಿತ ಸುದ್ದಿ ತಲುಪಿದೆ ಎಂದು ವಿದೇಶ್ ವಂದಿ.

ನೂತನ ಭಾರತ, ದುರಾಶೆ ಮತ್ತು ಸಾಮ್ರಾಜ್ಯತ್ವದಿಂದ ಕೂಡಿರುವ ನೆಹರು ಯೋಜನೆಗಳಿಂದ ಅಂಧವಾಗಿ ಏಷ್ಯಾ ಖಂಡದಲ್ಲಿ ಒಡಕನ್ನುಂಟು ಮಾಡುತ್ತದೆ ಎಂದು ಸೋವಿಯಟ್ ಪತ್ರಿಕೆ 'ನ್ಯೂ ಟೈಂಸ್'' ಇತ್ತೀಚೆಗೆ ಪುಟಗಳಷ್ಟು ಲೇಖನ ಬರೆದಿದೆ ಎಂದು ಮಾಸ್ಕೋ ವರದಿ.

ಭೂಪಾಲ್ ಕಾರ್ಮಿಕ ಸಭಾಧ್ಯಕ್ಷ ಶ್ರೀ ಷಕೀರ್ ಅಲಿ ಖಾನರು ಹೈದರಾಬಾದ್ ಕ್ಯಾನ್ಸರ್ ನಮ್ಮ ಪ್ರೀತಿಪಾತ್ರ ಮಾತೃಭೂಮಿಯನ್ನು ತಿನ್ನಲು ಆಸ್ಪದ ವೀಯಕೂಡದೆಂದೇ ತಿಳಿಸಿ ಭಾರತ ಸರ್ಕಾರದ ನೀತಿಯನ್ನು ಸಮರ್ಥಿಸಿ ಹೇಳಿಕೆಯಿತ್ತಿದ್ದಾರೆ

ವರದಕ್ಷಿಣೆ ಪದ್ಧತಿ ಹೋಗಬೇಕಾದ ಬಗ್ಗೆ ಶಾಶನವಾಗಬೇಕೆಂದು ಪಶ್ಚಿಮ ಬಂಗಾಳ ಶಾಸನ ಸಭಾಧ್ಯಕ್ಷರು ಶಾಸನ ಸಭೆಯಲ್ಲಿ ತಿಳಿಸಿದ್ದಾರೆ.

ಭಾರತ ಸೇನೆಯಲ್ಲಿ 300 ಮಂದಿ ಬ್ರಿಟಿಷ್ ಅಧಿಕಾರಿಗಳು ಇರುವರು. ಆದರೆ ಅವರು ಕಾಶ್ಮೀರ ಕಾರ್ಯಾಚರಣೆಯಲ್ಲಿ ಭಾಗವಹಿಸಲಿಲ್ಲ ಎಂದು ನವದೆಹಲಿ ವಂದಿ ತಿಳಿಸುತ್ತದೆ.

ಪೌ॥ ಸ॥ ಕಮಿಷನರಿಗೆ ಸುಸ್ವಾಗತ

ಮೈಸೂರು, ಆ 5 — ಪೌರಸಭೆಯ ನೂತನ ಕಮಿಷನರ್ ಶ್ರೀ ಮಿರ್ಜಾ ಸಫ್ದರ್ ಹುಸೇನ್ ಸಾಹೇಬ್‌ರವರಿಗೆ ಮೈಸೂರು ಪೌರಸಭಾ ಸದಸ್ಯರುಗಳು ಈದಿನ ಮಧ್ಯಾಹ್ನ ಸುಸ್ವಾಗತವಿತ್ತರು.

ಪೌರಸಭೆಯ ಸದಸ್ಯರಾದ ಶ್ರೀ ಎಫ್. ಸಿ. ದೇವರಾಜೆ ಅರಸಿನವರು ನೂತನ ಕಮಿಷನರಿಗೆ ಸುಸ್ವಾಗತ ಕೋರಿ, ಅವರೊಡನೆ ಆದರದಿಂದ ಸಹಕರಿಸುವುದಾಗಿ ತಿಳಿಸಿದರು.

ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಬಿ. ನಾರಾಯಣಸ್ವಾಮಿಯವರು ಭಾಷಣ ಮಾಡುತ್ತಾ ಕಮಿಷನರು ಮೈಸೂರಿನ ಸ್ಪರ್ಧಮ ಪ್ರಜೆ ಎಂದು ತಿಳಿದು ಕೆಲಸ ಮಾಡಬೇಕು ಎಂದು ತಿಳಿಸಿದರು.

ಅಧ್ಯಕ್ಷ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಭಾಷಣ ಮಾಡುತ್ತಾ, ಮೈಸೂರಿನ ಪ್ರಗತಿಗಾಗಿ ಕಮಿಷನರು ನಮ್ಮೊಡನೆ ಸಹಕರಿಸಿ ದುಡಿಯಬೇಕು ಎಂದು ತಿಳಿಸಿದರು

ನೂತನ ಕಮಿಷನರು ತಮ್ಮ ಬಗ್ಗೆ ವ್ಯಕ್ತಪಡಿಸಿದ ಆದರಕ್ಕಾಗಿ ವಂದಿಸುತ್ತಾ ಮೈಸೂರಿನ ಪ್ರಜಾ ಸೇವೆ ಮಾಡುವುದು ತಮ್ಮ ಕರ್ತವ್ಯ ಎಂದು ತಿಳಿಸಿದರು

ನೂತನ ಕಮಿಷನರನ್ನು ಅಧ್ಯಕ್ಷರು ಸದಸ್ಯರುಗಳಿಗೆ ಮತ್ತು ಪತ್ರಿಕೆಯವರುಗಳಿಗೆ ಪರಿಚಯ ಮಾಡಿಕೊಟ್ಟರು

ವಿಶೇಷ ಶಾಸನ ಜಾರಿ

ಶ್ರೀವಸ್ತ್ಯಹಾರಾಜರವರು ಮುದ್ರಿಸಿದ್ದು "ಎನೆರ್ಜೆನ್ಸಿ ಸ್ಪೆಷಲ್ ಪ್ರೋವಿಷನ್ಸ್ ಅಮೆಂಡ್‌ಮೆಂಟ್ ಎಮರ್ಜೆನ್ಸಿ ಆಕ್ಟ್" ಎಂಬ ನಾಮಧೇಯದಿಂದ ವಿಶೇಷ ಶಾಸನ ನಿನ್ನೆ ದಿವಸ ಜಾರಿಯಾಯಿತು.

ಕೆಲವು ನ್ಯಾಯಾಂಶಗಳನ್ನು ವಿವರಿಸಿ ಬೇಕಿರುವುದರಿಂದ ಕಂಟಿಂಪ್ಟ್ ಮೊಕದ್ದಮೆಯನ್ನು ನಾಳ್ವರು ನ್ಯಾಯಾಧೀಶರನ್ನೊಳಗೊಂಡ "ಫುಲ್ ಬೆಂಚ್" ಮುಂದೆ ತೀರ್ಮಾನವಾಗಲೆಂದು ತಾ॥ 12 ಕ್ಕೆ ಮುಂದೂಡಲಾಯಿತು.

ಸುದ್ದಿಗಳು

ದಕ್ಷಿಣ ಆಫ್ರಿಕಾ ಮುದ್ವೀಪ ಭಾರತ ಹತೋಟಿಗೆ ಕೆಂದು ತೀವ್ರ ಚಳುವಳಿ ಆರಂಭಗಿದೆ. ಈ ಚಳುವಳಿಗೆ 3 ಲಕ್ಷ ಭಾರತೀಯರು ಬೆಂಬಲವಿತ್ತಿದ್ದಾರೆ. 13 ಸಾವಿರ ಮಂದಿ ಬಿಳಿಯರು ಈ ಚಳುವಳಿಯನ್ನು ವಿರೋಧಿಸುತ್ತಿದ್ದಾರೆ.

ಆರುನೂರು ವರ್ಷಕ್ಕೆ ಮೇಲ್ಪಟ್ಟು ಪ್ರಾಚೀನನೆಂದು ಆಶ್ಚರ್ಯಗೊಳಿಸಿದ ಮಹಾ ಯೋಗಿ ಪ್ರಭಾಕರ ನಂಬೂದ್ರಿಯವರು ಖಗ ಮೃಗ ಕ್ರಿಮಿಕೀಟಾದಿಗಳೊಡನೆ ಸಂಭಾಷಿಸಲು ತಮಗೆ ಬರುವುದೆಂದು ಕೊಲ್ಲಿಕೋಡ್‌ನಲ್ಲಿ ತಿಳಿಸಿದ್ದಾರೆ.

ಬ್ರಿಟೀಷ್ ಪ್ರಭುತ್ವವೇನಾದರೂ ಹೈದರಾಬಾದಿಗೆ ಬೆಂಬಲವಿತ್ತರೆ ಭಾರತ ಬ್ರಿಟೀಷ್ ಕಾಮನ್‌ವೆಲ್ತ್‌ನಲ್ಲಿ ಉಳಿಯುವುದಿಲ್ಲವೆಂದು ಭಾರತದ ಮಾಜೀ ಗವರ್ನರ್ ಜನರಲ್ ಮೌಂಟ್‌ಬೇಟ್ಟನ್ ಪ್ರಧಾನಿ ಅಟ್ಲಿಯವರನ್ನು ಎಚ್ಚರಿಸಿದ್ದಾರೆ.

ಕಾಶ್ಮೀರ ವಿಚಾರಣಾ ಸಮಿತಿ ಕೇಳಿದ ಹಲವು ಪ್ರಶ್ನೆಗಳಿಗೆ ಉತ್ತರವೀಯಲು ಪಾಕಿಸ್ತಾನ ವಿದೇಶಾಂಗ ಮಂತ್ರಿ ಸರ್ ಜಫರುಲ್ಲಖಾನ್ ಅಸಮರ್ಥರಾಗಿದ್ದಾರೆ. ನಿದಾನವಾಗಿ ಉತ್ತರ ಕೊಡುವುದಾಗಿ ಅವರು ತಿಳಿಸಿರುವರು.

Woodlands
6—8—48 ರಿಂದ
— ಬೆಳಗಿನ ಪ್ರದರ್ಶನ —
ಖಜಾಂಚಿ
(ಅಮೋಘ ಹಿಂದಿ ಚಿತ್ರ)
ಪಾತ್ರ— ರಮೋಲಾ — ಇಸ್ಮೇಲ್

At Opera
31—7—48 ರಿಂದ
ಟಿ. ಆರ್. ರಾಮಚಂದ್ರ
ಎಂ ಆರ್ ಸ್ವಾಮಿನಾಥ್ ಭಾಗ್ಯಂ
ಟಿ. ಪ್ರೇಮಾವತಿ ಪಾತ್ರವಹಿಸಿರುವರು
ವಿದ್ಯಾಪತಿ
ಬಣ್ಣದ ರೀಲುಗಳುಳ್ಳದ್ದು
Morning Shows from 6-8-48
RETURNING OF
FIGHTING HERO

Indian Millionaire in America

ಅಮೇರಿಕಾದಲ್ಲಿ ಭಾರತೀಯ ಕೋಟೀಶ್ವರ

ಗೋಎಂದ ರಾಂ. ಜೆ. ನಾಟೂ ಮಲ್ ಎಂಬ ಕೋಟೀಶ್ವರನು ಈಗ ಹೊನುಲೂಲೂ ಎಂಬ ಪ್ರಾಂತ್ಯದಲ್ಲಿ ದ್ದಾನೆ. ಅಮೆರಿಕದಲ್ಲಿ ಪ್ರಾರನಾಗಿ ಅಂಗೀಕರಿಸಲ್ಪಟ್ಟು ಆ ಹಕ್ಕುಗಳನ್ನು ಅನುಭವಿಸುತ್ತಿರುವ ಕೆಲವು ಮಂದಿ ಪ್ರಾಚ್ಯ ಭಾರತೀಯರಲ್ಲಿ ಈತನೊಬ್ಬನು. ಆತನಿಗೆ ಭಾರತೀಯರಲ್ಲಿ ಅತ್ಯಭಿಮಾನ. ಆತನು ತನ್ನ ವ್ಯಾಪಾರದಿಂದ ಹೊಂದುತ್ತಿರುವ ಸಂಪತ್ತಿನಲ್ಲಿ ಸ್ವಲ್ಪ ಭಾಗವನ್ನು ಭಾರತ ದೇಶಾಭ್ಯುದಯಕ್ಕೆ ಮಿತ್ತವಾಗಿ ವಿನಿಯೋಗವಾಗಲು ಹವಾ ಈ ನಗರದಲ್ಲಿ ಒಂದು ಲಕ್ಷ ಡಾಲರುಗಳ ಮೂಲಧನದಲ್ಲಿ ಒಂದು ಟ್ರಸ್ಟನ್ನು ನಿರ್ಮಿಸಿರುವನು.

ಆತನು ಹುಟ್ಟಿದ್ದು ಹೈದರಾಬಾದಿನಲ್ಲಿ. ಅಲ್ಲಿ ಆತನನ್ನು "ಗೋಮಾ" ಎಂದು ಕರೆಯುತ್ತಿದ್ದರು. ಆತನ ತಂದೆ ಅಲ್ಲಿ ಕಂಟ್ರಾಕ್ಟರ್ ಆಗಿದ್ದನು. ಗೋಮಾವಿನ ಎಂಟನೆಯ ಹುಟ್ಟಿದ ಹಬ್ಬದ ದಿನವೇ ಆತನ ತಂದೆಯು ಒಂಟೆಯು ಮೇಲಿನಿಂದ ಬಿದ್ದು ಕೆಲಸ ಕಾರ್ಯಗಳಿಗೆ ನಿರರ್ಥಕನಾದನು. ಆತನ ಅಣ್ಣ ಝಾವಿಂದಾಸ್ ಜೀವನಕ್ಕಾಗಿ ಮುಸಿಲ್ಲಾ ನಗರಕ್ಕೆ ಹೋಗಿ ಹೊಟ್ಟೆಯನ್ನು ಹೊರೆದುಕೊಂಡು ತಂದೆಗೂ ತನ್ನಂದಿರಿಗೂ, ತಂಗಿಯರಿಗೂ ಸ್ವಲ್ಪ ಹಣವನ್ನು ಕಳುಹಿಸುತ್ತಿದ್ದನು.

ಗೋಮಾ ಚನ್ನಾಗಿ ಓದಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ತೇರ್ಗಡೆಯಾದನು. ತಿಂಗಳಿಗೆ 30 ರೂಗಳ ಸಂಬಳ ದೊರೆಯಿತು. ಆತನು ಮಾಡುತ್ತಿದ್ದ ಕೆಲಸಕ್ಕೆ ಅಂಗ್ಲೇಯನಿಗಾಗಿದ್ದಲ್ಲಿ 600 ರೂ. ಗಳನ್ನು ಕೊಡುತ್ತಿದ್ದರು.

ಒಂದು ದಿನ ಆತನ ದೃಷ್ಟಿಯು ಅಬ್ರಹಾಂಲಿಂಕಲ್‌ನ ಜೀವನ ಚರಿತ್ರೆಯ ಕಡೆಗೆ ಹೋಯಿತು. ಆ ಪುಸ್ತಕವನ್ನು ಓದುತ್ತಲೂ ನೀಗ್ರೋಗಳನ್ನು ಆತನು ಉದ್ಧರಿಸಿದಂತೆಯೇ ಯಾವಲಿಂಕನ್ನನಾದರೂ ಭಾರತ ದೇಶದಲ್ಲಿಯೂ ಹುಟ್ಟಿದಲ್ಲಿ ನಮ್ಮ ಸ್ಥಿತಿಯು ಎಷ್ಟು ಆನಂದದಾಯಕವಾಗಿರುತ್ತಿತ್ತೊ ಎಂದಂದುಕೊಂಡನು.

1917ರಲ್ಲಿ ಝಾನುಮಂದಾಸಿನಿಂದ ಆತನಿಗೆ ಒಂದು ಕಾಗದ ಬಂತು. ಆಗ ಯುವಮ[illegible]ಯಿಯಲ್ಲಿ ದ್ದನು. ಅಲ್ಲಿ ವೇತನೇಜದ ಕೆಲಸವು ಖಾಲಿ ಇರುವದೆಂದೂ ಗೋಮಾ ಬರಲೆಳಿಸುವನೇ ಎಂದು ಬರೆದನು. ಮೂರು ತಿಂಗಳ ಸೆವಯಕ್ಕೆ ಗೋಮಾ ಹೊನಲೂಲೂ ಸೇರಿಕೊಂಡನು.

ಇಂಡಿಯಾದಲ್ಲಿರುವಂತೆಯೇ ಆಗ ಅಲ್ಲಿ ಬಿಳಿಯವರಿಗೂ, ಕರಿಯವರಿಗೂ ಅಷ್ಟು ಹೆಚ್ಚು ಭೇದ ವಿರುತ್ತಿದ್ದಿಲ್ಲ. ಸಂಬಳ ಸಾರಿಗೆ ಮರ್ಯಾದೆ ಎಲ್ಲಾ ಸಮಾನವಾಗಿರುತ್ತಿದ್ದವು. ಆ ಕಾರಣಕ್ಕೆ ಅದು ಎಷ್ಟೋ ಸುಖವೆನಿಸಿತು. ಆತನು ಒಬ್ಬ ಅಮೆರಿಕ ಯುವತಿಯನ್ನು ಪ್ರೇಮಿಸಿ ಮದುವೆ ಮಾಡಿಕೊಂಡನು. ಆಕೆಯ ಹೆಸರು ಎಲ್ಲೆ ಜೆಂಸೆ ಒಂದು ಕಳಾಶಾಲೆಯಲ್ಲಿ ಆಕೆಯು ಸಂಗೀತ ಶಾಸ್ತ್ರೋಪಾಧ್ಯಾಯನಿಯಾಗಿದ್ದಳು. ಆದುದರಿಂದ ಅಲ್ಲಿ ಅದೂ ಸಾಧ್ಯವಾಯಿತಾಗಲಿ, ಬಿಳಿಯವರೂ ಅಂಥಾ ಕೆಲಸಗಳನ್ನು ತಮ್ಮ ಕನ್ಯೆಯರಿಂದ ಮಾಡಿಸುವರೇ? ಬ್ರಿಟಿಷರಿಗೂ, ಅಮೆರಿಕರಿಗೂ ಅಷ್ಟು ವ್ಯತ್ಯಾಸವಿತ್ತು ಮತ್ತೂ ಇದೆ.

ಅನುಕೂಲ ದಾಂಪತ್ಯ

ಈ ಕಪ್ಪು ಮನುಷ್ಯನೂ ಆಶ್ವೇತ ಕನ್ಯೆಯೂ ಬಹಳ ಅನ್ಯೋನ್ಯ ಭಾವದಿಂದಿರುತ್ತಿದ್ದರು.

ಆದರೂ ಗೋಮತಿಗೆ ಅಮೆರಿಕದ ಪ್ರಜೆಗಿರಿಗಿರುವ ಹಕ್ಕು ಬರಲಿಲ್ಲ. ಸಾಲದ್ದಕ್ಕೆ ಎಲ್ಲೆ ಜೆನ್ಸ್ ಹಕ್ಕು ಕೂಡ ತೆಗೆದು ಹಾಕಿದರು. ಆಕೆಯು ತಮ್ಮಿಬ್ಬರಿಗೂ ಪುನಃ ಆ ಹಕ್ಕು ದೊರೆಯುಬಹುದೆಂದು ಧೈರ್ಯ ಹೇಳಿದಳು. ಆದರೆ ಅಲ್ಲಿಯೂ ಜಾತ್ಯಹಂಕಾರವಿದ್ದಿತ. ಭಾರತೀಯರು ಯಾರೂ ಅಲ್ಲಿ ಅಡಿ ಇಡಕೂಡದೆಂದು ಸುಪ್ರೀಂ ಕೋರ್ಟಿನ ಆರ್ಡರು ಆಗುತ್ತಲು ಇವರಿಬ್ಬರ ಆಶೆಯು ನಿರಾಶೆಯಾಯಿತು.

ಆ ಸಮಯದಲ್ಲಿ ಅವರಿಗೆ ಕಷ್ಟಪಟ್ಟು ಕೆಲಸ ಮಾಡಿದಿಕೆ, ಕೂಟ್ಟಸ್ಟು ತೆಗೆದು ಕೊಳ್ಳುವಿಕೆಯು ವಿನಹಾ ಬೇರೆ ಮಾರ್ಗವೇ ಇಲ್ಲದೆಹೋಯಿತು. ಆ ಸಮಯಕ್ಕೆ ಆತನ ಅಣ್ಣನೇ ವ್ಯಾಪಾರವನ್ನು ಸಾಕಮಾಡಿಕೊಂಡನು. ತಮ್ಮ ನ ಸಂಪಾದನೆಯಲ್ಲಿ ವಿಗುವುದು ಬಹು ಸ್ವಲ್ಪವಾಗಿತ್ತು. ಆದರೂ ಆತನು ವ್ಯಾಪಾರದಲ್ಲಿಳಿದನು. ಗಂಡಹೆಂಡರಿಬ್ಬರೂ ಕಷ್ಟಪಟ್ಟು ತಾವು ಪ್ರಾರಂಭಿಸಿದ ಸಣ್ಣ ಅಂಗಡಿಯು ಹತ್ತು ವರ್ಷಕ್ಕೆ ಆ ಬೀದಿಯು ಉದ್ದಕ್ಕೂ ಹಬ್ಬಿತು. ಕೆಲಸಗಾರರ ಸಂಖ್ಯೆಯು ಹೆಚ್ಚಿತು ಕೆಲಸಗಾರರನ್ನು ಮಿತ್ರರಂತೆ ಆತನು ಕಾಣುತ್ತಿದ್ದನು. ಎಲ್ಲರ ಊಟಉಪಚಾರಗಳೂ ತನ್ನ ಮನೆಯಲ್ಲಿಯೇ ನಡೆಯುತ್ತಿದ್ದಿತು. ಅದು ಒಂದು ತಮಾಷೆಯಾದ ಸಂಸಾರ.

ವಾಟುಮುಲ್ಲು ಕಂಪೆನಿಯೆಂದು ಕಂಪೆನಿಯ ಹೆಸರು. ಆತನು ಮಾಡಿದ ಅನೇಕ ವ್ಯಾಪಾರಗಳಲ್ಲಿ ಉಪಹಾರ ಶಾಲೆಗಳನ್ನು ನಡೆಸುವುದು ಒಂದು ಭಾಗವಾಗಿತ್ತು. ಒಟ್ಟು ವ್ಯಾಪಾರದಲ್ಲಿಯೇ ಅಲ್ಲದೆ ಮಾರಾಟದ ಹಣದಲ್ಲಿಯೂ ಒಂದು ಭಾಗವನ್ನು ಆತನು ಉದ್ಯೋಗಿಗಳ ಮತ್ತು ಅತಿಥಿಗಳ ಖರ್ಚಿಗಾಗಿ ಬೇರ್ಪಡಿಸುತ್ತಿದ್ದನು. ಈ ಕಾರಣದಿಂದ ಮಾರಾಟವೂ ಅದರೊಂದಿಗೆ ಲಾಭವೂ ಹೆಚ್ಚಿತು ಸಂಬಳದೊಂದಿಗೆ ರಜ ಆರೋಗ್ಯ ವಿಮೆ, ವ್ಯಾಪಾರದಲ್ಲಿ ಬೋನಸ್ಸು, ಇವುಗಳೊಂದಿಗೆ ಪ್ರತಿ ಉದ್ಯೋಗಿಗೂ ಒಂದು ಸ್ವಂತ ಮನೆ ಏರ್ಪಾಡು ಮಾಡಿದನು.

1937 ನೆಯ ಇಸ್ವಿಯ ಸಮಯದಲ್ಲಿ ಆ ಹಾಪುಗಳಿಗೆ ದೊಡ್ಡ ಭವನಗಳನ್ನು ಕಲ್ಪಿಸುವುದಲ್ಲದೆ ವೈಕಿಯಲ್ಲಿ ಒಂದು ಪ್ರದರ್ಶನ ಶಾಲೆಯನ್ನೂ, ಟೌನಿನ ಕೆಳ ಭಾಗದಲ್ಲಿ ಒಂದು ಬ್ರಾಂಚನ್ನೂ ಪ್ರಾರಂಭಿಸಿದನು ಗಂಡಹೆಂಡರಿಬ್ಬರೂ ಸಮಾನಭಾವಸ್ವಾಮಿಗಳು. ಈ ಸಮಯಕ್ಕೆ ಅವರಿಗೆ ಇಬ್ಬರು ಹೆಣ್ಣು ಮಕ್ಕಳೂ, ಒಬ್ಬ ಮಗನೂ ಕೂಡ ಹುಟ್ಟಿದರು. ಆಕೆಯು ಸಂಸಾರವನ್ನು ನೋಡಿಕೊಳ್ಳುವುದೇ ಅಲ್ಲದೆ ವ್ಯಾಪಾರ ಪ್ರಕಟಣೆಗಳೆಲ್ಲವನ್ನೂ ತಾನೇ ಚಿತ್ರಿಸಿ, ಆ ಶಾಖೆಯನ್ನು ಪರಿಶೀಲಿಸುತ್ತಿದ್ದಳು. ಅಲ್ಲದೆ ದೊಡ್ಡ ಪಾಪಿನ ವ್ಯವಹಾರವನ್ನೆಲ್ಲವನ್ನೂ ತಾನೇ ನಿರ್ವಹಿಸುತ್ತಿದ್ದಳು. ವರ್ಷವೊಂದಕ್ಕೆ 20 ಲಕ್ಷ ಡಾಲರುಗಳ ವ್ಯಾಪಾರವು ನಡೆಯುತ್ತಿತ್ತು.

ಇಂದಿಗೆ ವಾಟೂವಲ್ಲಿನ ಇಚ್ಛೆಯು ನೆರೆದೇರಿತು. ಭಾರತ ದೇರೆವು ಅಮೇರಿಕಾ ಸಂಯುಕ್ತ ರಾಷ್ಟ್ರಗಳಂತೆಯೇ ಶ್ರೀಮಂತವೂ ಆರೋಗ್ಯವಂತವೂ ಆಗಬೇಕೆಂಬುದೇ ಆತನ ಆಶಯವು. ಈತನ ಹೆಂಡತಿಯು ಈ ಅಭಿಪ್ರಾಯದಲ್ಲಿ ಏಕೀಭವಿಸುವಿಕೆಯು ವತ್ತೊಂದು ವಿಶೇಷವು. ಭಾರತದೇಶದಲ್ಲಿ ವರ್ಷಂಪ್ರತಿ ಪ್ಲೇಗು, ಕಾಲರಾ, ಮಲೇರಿಯಾ ಮೊದಲಾದ ರೋಗಗಳಿಂದ 60 ಲಕ್ಷ ಮಂದಿ ಸಾಯುತ್ತಿರುವರು. ಇದನ್ನು ನಿಲ್ಲಿಸಬೇಕೆಂಬುದೇ ಆತನ ಬಯಕೆ ; ಎಂಟು ಕೋಟಿ ಮಂದಿ ಹಸಿನೆಯಿಂದ ಕೃಷಿಸುತ್ತಿರುವರು. ಅವರಿಗೆ ಅನ್ನವನ್ನು ನೀಡಬೇಕೆಂಬುದೇ ಅವನ ಇಚ್ಛೆ. ಭಾರತ ದೇಶವು ಪಾರಿಶ್ರಾಮಿಕವಾದ ವಿನಹಾ ಈ ಲೋಪಗಳು ನಿವಾರಣೆಯಾಗುವುದಿಲ್ಲವೆಂಬುದು ಆತನ ನಿಶ್ಚಿತಾಭಿಪ್ರಾಯವು.

SUDHA KIRAN

A Superb Tonic

ಶಕ್ತಿ ಸುಧಾ :
ದೇಹಪುಷ್ಟಿಗೆ
ಮುಖಕಾಂತಿಗೆ
ಶಕ್ತಿ ಸಾಧನೆಗೆ
ಸಂ[illegible]

ಶಕಿಸುಧಾ

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ

Save the

ಗೋವಧೆ

Edited, Printed and Pub[illegible]
by M S Krishna Ra[illegible]
Satyavadi P[illegible]
Ab[illegible]

...ವಸಾಯ ಪದ್ಧತಿ

...ತಿಯಿಂದ ಯಾವ ದೇಶ
...ಲ್ಲವೆಂದೂ ಅದಕ್ಕಾಗಿಯೆ
...ು ಸರಕಾರವು ಈ ವಿಷಯವನ್ನ
...ು ಆಲೋಚಿಸಿಲ್ಲವೆಂದೂ ಹಿಂದೆ
...ನು ಮಂತ್ರಿಯಾಗಿದ್ದ ಡಾ| ಸುಬ್ಬ
...ುನ್ನರು ಹೇಳಿರುವರು. ಆ ಷ್ಟೇ
...ಲ್ಲ. ನಮ್ಮ ದೇಶದಲ್ಲಿ ಬೆಲೆಗಳು
ಅತಿಯಾಗಿ ಹೆಚ್ಚಿರುವುದೆಂದೂ, ಈ
ಕಾರಣದಿಂದಲೇ ಸಕಕಾರದ ಧಾನ್ಯಗಳ
...ಲೆಗಳನ್ನು ಹೆಚ್ಚಿಸಿರುವುದೆಂದೂ ಹೇಳಿ
...ುವರು.

ರಷ್ಯಾದಲ್ಲಿ ಸಮಿಷ್ಟಿ ವ್ಯವಸಾಯ
ಪದ್ಧತಿಯಲ್ಲಿ ಧಾನ್ಯವನ್ನು ಬೆಳೆಸುವ
ರು. ಈಗ ರಷ್ಯಾದಲ್ಲಿ ಧಾನ್ಯಗಳ
ಬೆಲೆಗಳನ್ನು ತಗ್ಗಿಸುತ್ತಿರುವರು. ಶೇಕಡ
50 ರಷ್ಟು ಬೆಲೆಗಳು ಬಿದ್ದುಹೋಗಿವೆ
...ಟ್ಟನ ಬೆಲೆಯು ಕಿಲೋಗ್ರಾಂಗೆ 40
...ಬಲ್ಸಿನಿಂದ 8 ಕ್ಕೆ ಇಳಿಸಿದ್ದಾರೆ.
...ಯೇ ರೊಟ್ಟಿ ಮತ್ತು ಇತರ
...ನ್ಯಗಳ ಬೆಲೆಗಳನ್ನೂ ತಗ್ಗಿಸಿದ್ದಾರೆ.
ರಷ್ಯಾದಲ್ಲಿ ಜೀವಿತಕ್ಕೆ ಅವಶ್ಯಕ
...ಪದಾರ್ಥಗಳು ಬಹಳ ಸುಲಭವಾ
...ುತ್ತಿವೆ.
...ವಾಗ ಸಮಿಷ್ಟಿ ವ್ಯವಸಾಯ
...ದ ಯಾವ ದೇಶವೂ ಸುಖಿ
...ಂದು ಮಂತ್ರಿಗಳು ಹೇಗೆ
...ರೋ ? (ಮಾ)

ಂ ಂ

ಜೈಪ್ರಕಾಶರ ತಂತಿ

...ೈಲ್ವೆ ಕಾರ್ಮಿಕರೆಲ್ಲರನ್ನೂ ಖುಲಾ
...ಾಡಬೇಕೆಂದು ಅಖಿಲ ಭಾರತ
...ಾವಾದಿ ಪಕ್ಷದ ಪ್ರಧಾನ ಕಾರ್ಯ
...ೀ ಜೈಪ್ರಕಾಶ್ ನಾರಾಯಣ್
...ರು ಸರ್ಕಾರಕ್ಕೆ ತಂತಿ ಕಳಿಸಿ
...ಈ ಬಗ್ಗೆ ಸಂಧಾನ ನಡೆಸಲು
2 ರಲ್ಲಿ ಬೊಂಬಾಯಿನ ಸಮಾ
...ೀ ಪೀಟರ್ ಆಲ್ವಾರಿಸ್ ಬರು

ಂ

...ತಿಭಟನಾ ಸಭೆ

...ಹೈಡ್ ಪಾರ್ಕಿನಲ್ಲಿ ಶನಿ
...ಾರತ ಯೂನಿಯನ್ನಿಗೆ ಯಾವ
...ಷರತ್ತು ಇಲ್ಲದೆ ಹೈದರಾಬಾದ್ ಶರ
...ಾಗತವಾಗಬೇಕು ಎಂಬುದರ ವಿರುದ್ಧ
ಸೇರುವ ಪ್ರತಿಭಟನಾ ಸಭೆಗೆ ಬ್ರಿಟೀಷ್
ಸಾರ್ವಜನಿಕರು ಬರಬೇಕೆಂದು ಚೀಟ
...ಹಚ್ಚಲಾಗಿದೆ ಹೈದರಾಬಾದನ್ನು ಪ್ರಶಂ
...ಯಲಾಗಿದೆ

ಲಂಡನ್ನಿನಲ್ಲಿ ಭಾರತ ಸ್ವಾತಂತ್ರ್ಯ ದಿನಾಚರಣೆ

ಇದೇ ತಾ || 15 ರಲ್ಲಿ ಲಂಡನ್ನಿನಲ್ಲಿ ವೈಭವದಿಂದ ಜರುಗುವ ಭಾರತ ಸ್ವಾತಂತ್ರ್ಯ ದಿನಾಚರಣೆ ಸಂಬಂಧವಾಗಿ ಏರ್ಪಡಿಸಿರುವ ಸಭೆಯಲ್ಲಿ ಲಾರ್ಡ್ ಲೂಯಿ ಮೌಂಟ್ ಬೇಟ್ಟ ಮತ್ತು ಸರ್ ಸ್ಟಾಫರ್ಡ್ ಕ್ರಿಪ್ಸ್ ಭಾಷಣ ಮಾಡುವರು.

ಇದೇ ಸರಿಯಾದ ಕಾರ್ಯಕ್ರಮ

ಹೈದರಾಬಾದಿನ ಬಗ್ಗೆ ಭಾರತ ಸರಕಾರ ಅನುಸರಿಸುತ್ತಿರುವ ನೀತಿ ತೃಪ್ತಿಕರವಾಗಿದೆ ಎಂದು ಬೊಂಬಾಯಿ ಪ್ರಧಾನಿ ಶ್ರೀ ಬಿ. ಜಿ. ಖೇರ್ ಬೆಂಗಳೂರಿನಲ್ಲಿ ತಿಳಿಸಿದ್ದಾರೆ.

ಗಾಂಧೀಜೀ ಸಲಹೆ ಪಡೆಯಬಹುದಿತ್ತು

ಸಂಯುಕ್ತ ರಾಷ್ಟ್ರದ ಕಾಶ್ಮೀರ ವಿಚಾರಣೆ ಸಮಿತಿ ಅಧ್ಯಕ್ಷ ಗಾಂಧೀಜೀ ಅಂತ್ಯ ಕ್ರಿಯೆಗಳು ಜರುಗಿದ ರಾಜಾ ಘಾಟಿಗೆ ನಿನ್ನೆ ಭೇಟಿ ಇತ್ತು ವುಷ್ಪ ಅರ್ಪಿಸಿದಾಗ, ಕಾಶ್ಮೀರ ಸಮಸ್ಯೆ ನಿವಾರಣೆ ಬಗ್ಗೆ ಗಾಂಧೀಜೀ ಬದುಕಿದ್ದರೆ ಅವರ ಸಲಹೆ ಪಡೆಯಬಹುದಾಗಿತ್ತು ಎಂದು ತಿಳಿಸಿದರು.

ರಿವಿಜ್ ಅರ್ಜಿಗಳು

ಆಗಸ್ಟ್ ತಾ|| 2 ರಲ್ಲಿ ಶ್ರೀ ಪಿ. ಆರ್. ರಾಮಯ್ಯ, ಶ್ರೀ ಪಿ. ಬಿ ಶ್ರೀನಿವಾಸ ಮತ್ತು ಶ್ರೀ ಎಸ್. ಎಸ್. ರಾಜುರವರ ರಿವಿಜ್ ಅರ್ಜಿಗಳ ವಿಚಾರಣೆ ಪ್ರಾರಂಭವಾಗುವುದೆಂದು ಗೊತ್ತಾಗಿದೆ. ಶ್ರೇಷ್ಠ ನ್ಯಾಯಸ್ಥಾನದ ಆಜ್ಞೆ ಮೇರೆ ಗೋಪಾಲರಾವ್ ವಿಚಾರಣ ಸಮಿತಿ ಕಾರ್ಯದರ್ಶಿಗಳ ವಿಳಾಸಕ್ಕೆ ನೋಟೀಸ್ ಕಳಿಸಲಾಗಿದೆಯೆಂದು ತಿಳಿದು ಬಂದಿದೆ.

ಮೌಂಕ್ಟ್ ಅಭಿಪ್ರಾಯ

ಲಂಡನ್, ಜು 27—ಬ್ರಿಟ್ ಅಥವಾ ಬ್ರಿಟಿಷ್ ಕಾಮನ್‌ವೆಲ್ತ್ ಹೈದರಾಬಾದ್-ಇಂಡಿಯಾ ಬಗ್ಗೆ ಮಧ್ಯಸ್ಥಿಕೆ ವಹಿಸದಿದ್ದರೆ, ವಿಶ್ವಸಂಸ್ಥೆಗೆ ಮನವಿ ಮಾಡಿಕೊಳ್ಳದೇ ನಿಜಾಂಗೆ ಬೇರೆ ದಾರಿಯೇ ಇಲ್ಲ ಎಂದು ಸರ್ ಮೌಂಕ್ಟನ್ನರ ಅಭಿಪ್ರಾಯವೆಂದು ನಂಬಲಾ

ಶ್ರೀ ದಾಸಪ್ಪನವರ ರಾಜೀನಾಮೆ

ಮೈಸೂರು ಸಂಸ್ಥಾನದ ಆರ್ಥಿಕ ಸಚಿವರೂ, ಗಾಂಧೀಜೀ ಪಟ್ಟ ಶಿಷ್ಯರೂ ಆದ ಶ್ರೀ ಹೆಚ್. ಸಿ. ದಾಸಪ್ಪನವರು ತಮ್ಮ ಮಂತ್ರಿ ಪದಕ್ಕೆ ರಾಜೀನಾಮೆ ಕೊಡುವರೆಂದು ತಿಳಿದುಬಂದಿದೆ.

ಮಂತ್ರಿವರ್ಯರ ಕನಸಿನಲ್ಲಿ ಇತ್ತೀಚಿಗೆ ಗಾಂಧೀಜೀ ಪ್ರತ್ಯಕ್ಷವಾಗಿ ನನ್ನಂತೆಯೇ ನೀವೂ ಸಹ ಜಾತಿ ಮತ ಐಕ್ಯತೆಗಾಗಿ ದುಡಿಯಬೇಕು. ಆಶ್ರಮ ಜೀವನ ಜರಿಗಿಸಬೇಕು ಎಂದು ಅಪ್ಪಣೆ ಇತ್ತರು ಎಂದು ಪದಂತಿ !

ಶ್ರೀ ದಾಸಪ್ಪನವರು ಈ ಅಪ್ಪಣೆಯನ್ನು ಅಂಗೀಕರಿಸಿ ಬೆಳವಾಡಿಯಲ್ಲಿ ಆಶ್ರಮ ತೆರೆಯುವುದಾಗಿ ವದಂತಿ !

ಶ್ರೀ ದಾಸಪ್ಪನವರನ್ನು ಮೈಸೂರಿನ ಗಾಂಧೀಜೀ ಎಂದರೆ ಅತಿಶಯವಲ್ಲ !

ಬೆಂಗಳೂರಿನಲ್ಲಿ ಟೆಲಿಫೋಕ್ ಕಾರ್ಖಾನೆ ನಿರ್ಮಾಣ ಸಂಬಂಧದಲ್ಲಿ ಕೇಂದ್ರ ಸರ್ಕಾರದ ಮಂತ್ರಿ ಶ್ರೀ ರಫಿ ಅಹ್ಮದ್ ಕಿದ್ವಾಯಿ ಬೆಂಗಳೂರಿಗೆ ಮುಂದಿನ ತಿಂಗಳು ಪ್ರಥಮವಾರದಲ್ಲಿ ಬರುವರು

ಮೈಸೂರು ಸಂಸ್ಥಾನ ಕಾಂಗ್ರೆಸ್ ಅಖಿಲಭಾರತ ಕಾಂಗ್ರೆಸ್ಸಿನಲ್ಲಿ ಐಕ್ಯವಾಗಬೇಕೆಂದು ಬೆಂಗಳೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಹಿತೈಷಿ ಪಡಿಸಿದೆ.

ಬೆಂಗಳೂರು ಬಳಿಯಿರುವ ಹೆಸರಗಟ್ಟದಲ್ಲಿ ಭಾರತ ನೌಕಾ ಪಡೆ ಇಲಾಖೆಯವರು ನೌಕಾಶಿಕ್ಷಣ ಕೇಂದ್ರ ತೆಗೆಯುವರೆಂದು ಗೊತ್ತಾಗಿದೆ

ಪೋರ್ಚುಗೀಸ್ ರಾಜ್ಯ ಗೋವಾದಲ್ಲಿ ಪಾಕೀಸ್ತಾನದಿಂದ ಹೈದರಾಬಾದಿಗೆ ಹಾರಿದ್ದ ಸಿಡ್ನಿ ಕಾರ್ಟರ್ ಇಳಿದಿದ್ದನು

ಶ್ರೀಮನ್ಮಹಾರಾಜರ ವರ್ಧಂತ್ಯುತ್ಸವ ಸಂಸ್ಥಾನಾದ್ಯಂತ ವೈಭವದಿಂದ ಜರುಗಿತು

ಶ್ರೀಮನ್ಮಹಾರಾಜರ ವರ್ಧಂತ್ಯುತ್ಸವ ಸಂಕೇತವಾಗಿ ಸಂಸ್ಥಾನಾದ್ಯಂತ ಗಿಡ ನೆಡುವ ಸಮಾರಂಭ ಜರುಗಿತು.

ವರ್ತಮಾನ ಸಂಗ್ರಹ

ಚಿಕ್ಕಮಗಳೂರು—ಸ್ಥಳೀಯ ನಗರ ನಿರ್ಮಲೀಕರಣದವರು ಎಂಟು ದಿವಸಗಳ ಕಾಲಾವಧಿಯನ್ನು (ತಾ|| 27 ರಿಂದು ಇಕ್ಕು, ಕ್ಷೌರಿಕರು ತಮ್ಮ ಮನೋಭಾವವನ್ನು ಬದಲಾಯಿಸಿ ಆಯುಷ್ಯರ್ಮಶಾಲೆಗಳಿಗೆ ನಗರ ನಿರ್ಮಲೀಕರಣದವರನ್ನು ಬಿಡಬೇಕೆಂದು ತಿಳಿಸಿರುವರು. ಆ ಅವಧಿಯ ವರೆಗೆ ತಾವು ನ್ಯಾಯಸ್ಥಾನ ಹತ್ತುವುದಿಲ್ಲವೆಂದು ತಿಳಿಸಿರುವರು.

ಬೆಂಗಳೂರು ಪೌರಸಭೆಯವರು ಸ್ಥಾಪಿಸಲಿರುವ ಇಂಜನಿಯರಿಂಗ್ ಕಾಲೇಜಿಗೆ "ರಾಜಾಜಿ ಇಂಜನಿಯರಿಂಗ್ ಕಾಲೇಜ್" ಎಂದು ನಾಮಕರಣ ಮಾಡಬೇಕು ಮತ್ತು ಆ ಕಾಲೇಜಿನ ಶಂಕುಸ್ಥಾಪನಾ ಮಹೋತ್ಸವವನ್ನು ಶ್ರೀ ರಾಜಾಜಿಯವರೇ ತಮ್ಮ ಅಮೃತಹಸ್ತದಿಂದ ನೆರವೇರಿಸಬೇಕು ಮತ್ತು ರಾಜಾಜಿಯನ್ನು ಸನ್ಮಾನಿಸುವ ಬಗ್ಗೆ ರೂ. 2000 ಮಂಜೂರು ಮಾಡಬೇಕು ಎಂಬ ನಿರ್ಣಯಗಳು ನಿನ್ನೆ ಬೆಂಗಳೂರು ಪೌರಸಭೆಯಲ್ಲಿ ಸರ್ವಾನುಮತದಿಂದ ಅಂಗೀಕೃತವಾದವು.

ರಷ್ಯಾ ಸ್ಟಾಲಿನ್ನರ ಪುತ್ರ ಲೆ|| ಜಿ|| ಸ್ಯಾಸಿಲೆ ಸ್ಟಾಲಿನ್‌ರು "ಫೈಟರ್ ಫೋರ್ಸ್" ಅಡಳಿತವನ್ನು ವಹಿಸಿಕೊಳ್ಳುವರು ಎಂದು ರಷ್ಯಾ ಪತ್ರಿಕೆಗಳು ಪ್ರಕಟಿಸಿವೆ.

ಆಗಸ್ಟ್ ತಾ|| 15 ರಲ್ಲಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಮದ್ರಾಸು ವಿಶ್ವವಿದ್ಯಾಲಯ ಘಟಿಕೋತ್ಸವ ಭಾಷಣ ಮಾಡುವರು.

ಚಿಂತಾಮಣಿಯಲ್ಲಿ ಅಕ್ಕಿ ರೂ. ಗೆ ಒಂದು ಸೇರಿನಂತೆ ಮಾರಾಟವಾಗುತ್ತಿದೆ ಕಳೆದ ವಾರ ಚಿಂತಾಮಣಿ ಪ್ರಜೆಗಳಿಗೆ ತಲಾ ಒಂದು ಚಟಾಕಿನಂತೆ ಅಕ್ಕಿ ಕೊಡಲಾಯಿತು.

ನವದೆಹಲಿ ಜು 28—ಸರ್ ವಾಲ್ಟರ್ ಮೌಂಕ್ಟನ್ ಆಸ್ಥಾ ಕಾರ್ಯದರ್ಶಿ ಶ್ರೀ ರಿಚರ್ಡ್ ಬ್ಯೂಮೌಂಟ್ ದೆಹಲಿ ಸಂಕ ಅಧಿಕಾರಿಗಳಿಂದ ಶೋಧಿಸಲ್ಪಟ್ಟಾಗ ಅವರ ಬಳಿ ಒಂದು ಚಿನ್ನದ ಗಡಿಯಾರ ಮತ್ತು ಒಂದು ಚಿನ್ನದ ಫೌಂಟೆನ್ ಪೆನ್ನು ದೊರೆಯಿತು. ಇವುಗಳು ಅವರ ಸೇವೆಗಾಗಿ ನಿಜಾಮರು ಇತ್ತ ಪಾರಿತೋಷಿಕವೆಂದು ಊಹಿಸಲಾಗಿದೆ.

ಆಫೀಸಿನಲ್ಲಿ ಸಿಂಹ

ಅಮೆರಿಕ ಸಂಯುಕ್ತ ರಾಷ್ಟ್ರಗಳಲ್ಲಿಯ ಮಿಚಿಗನ್ ಸ್ಟೇಟಿಗೆ ಸೇರಿದ 'ಕೆಲಮಾಜೂ' ನಗರದಲ್ಲಿ ಹೋವರ್ಡ್ ಕೂಪರ್ ಎಂಬ ಬೇಟೆಗಾರನು ಆಫೀಸಿನಲ್ಲಿ ಒಂದು ಸಿಂಹವನ್ನು ಬೆಳಿಸಿದ್ದಾನೆ. ಅದನ್ನು ಅಮೆರಿಕದ ಎಲ್ಲಾ ರಾಷ್ಟ್ರಗಳವರೂ ಬಂದು ನೋಡಿಕೊಂಡು ಹೋಗುತ್ತಿರುತ್ತಾರೆ. ಅದರ ಹೆಸರು ಮಗ್ಸು. ಅದು ಹಾಲು ಮೊಟ್ಟೆ, ಸೂಪ್ ಐಸ್‌ಕ್ರೀಂಗಳನ್ನು ತಿಂದು ಬೆಳೆಯುತ್ತಿದೆ

ಅದಮಾರ್ ಮಠ

ಅಷ್ಟ ಮಠಗಳಲ್ಲೊಂದಾದ ಅದಮಾರು ಮಠದ ಶ್ರೀ ವಿಭುಧೇಶತೀರ್ಥ ಶ್ರೀ ಪಾದಂಗಳವರು ಕಳೆದ ತಾ|| 14 ರಂದು ಅತ್ಯಂತ ವೈಭವದಿಂದ ಗುರುಗಳ ಆರಾಧನೆಯನ್ನು ನೆರವೇರಿಸಿದರು ಅಸಂಖ್ಯಾತ ಬ್ರಾಹ್ಮಣರಿಗೆ ಭೂರಿ ಭೋಜನ ಮಾತ್ರವಲ್ಲದೆ ಯಥೇಚ್ಛ ದಾನ ಧರ್ಮ ದಕ್ಷಿಣೆಗಳನ್ನೂ ಮಾಡಿದರು. ಮರು ದಿನ ಬಡಬಗ್ಗರಿಗಾಗಿ ಊರ ಛತ್ರದಲ್ಲಿ ಭೋಜನದ ಏರ್ಪಾಡೂ ಮಾಡಿದ್ದರು

ಸಾಹಿತ್ಯ ಸೇವೆ

ಅಷ್ಟಾದಶ ಮಹಾ ಪುರಾಣಗಳಲ್ಲಿ ಒಂದಾದ ಶ್ರೀ ದೇವೀ ಭಾಗವತ ಪುರಾಣವನ್ನು, ಕರ್ಣಾಟಕ ಶಂಕರ ವಿಜಯ ಮೊದಲಾದ ಗ್ರಂಥಗಳನ್ನು ವಿರಚಿಸಿ ಪ್ರಸಿದ್ಧರಾಗಿರುವ ಪೌರಾಣಿಕ ಸಾಲಿಗ್ರಾಮ ಶ್ರೀಕಂಠಶಾಸ್ತ್ರಿಗಳೆಂಬುವರು ಕನ್ನಡ ಭಾಮಿನೀಷಟ್ಪದೀ ರೂಪವಾಗಿ 14,050. ಪದ್ಯಗಳಾಗಿ ಹೊಸದಾಗಿ ವಿರಚಿಸಿರುವರು. ಕನ್ನಡ ಷಟ್ಪದೀ ಕಾವ್ಯಗಳಲ್ಲಿ ಒಬ್ಬ ಕವಿಯು ಇಷ್ಟು ದೊಡ್ಡ ಗ್ರಂಥವನ್ನು ಬರೆದಿರುವುದಕ್ಕೆ ಇದೇ ಮೊದಲು. ಇವರು ಗ್ರಂಥ ಶಾಂತಿಗಾಗಿ ಸಧ್ಯದಲ್ಲಿ ದೇವೀ ಯಾಗವೊಂದನ್ನು ರಚಿಸಿ ಅನಂತರ ಮುದ್ರಣ ಪ್ರಯತ್ನ ಮಾಡುವರೆಂದು ತಿಳಿಯಬಂದಿದೆ.

At Opera

24—7—48 ರಿಂದ

ಕಿಸ್ಮತ್ ವಾಲಿ

[ಹಿಂದಿ]

ನಾದಿಯ ಜಾರ್ ಕವಾಸ್ ಸಯಾನಿ

ರಾನಿಬಾಲ ಫ್ಲಾ ನಹಿಸಿರುವರು

ನರ್ತಕಿಯೊಡನೆ ರಜಕಾರರ ಗುಪ್ತ ಸಂಚಾರ

ಹೈದರಾಬಾದಿನಿಂದ ಐದು ಜನ ರಜಕಾರರು ನರ್ತಕಿಯೊಡನೆ ಸೇರಿಕೊಂಡು ಮಧ್ಯಸ್ಥಾಂತದಲ್ಲಿ ಹಿಂದು ಜನರಲ್ಲಿ ಸಂಚರಿಸುತ್ತಾ, ಗುಪ್ತ ಪ್ರಚಾರ ನಡಿಸಿದ್ದರು. ಸೈನಿಕ ಮಹತ್ವದ ಮಾಹಿತಿಯನ್ನು ಕೂಡಿಸುತ್ತಾ, ಹೈದರಾಬಾದಿಗೆ ತಿಳಿಸುತ್ತಿದ್ದರು. ಭಾರತವು ಹೈದರಾಬಾದದ ಮೇಲೆ ದಾಳಿ ಮಾಡಿದರೆ, ಪಾಕಿಸ್ಥಾನವು ಭಾರತದ ಮೇಲೆ ದಾಳಿ ಮಾಡುವದೆಂದು ಪ್ರಚಾರ ಮಾಡುತ್ತಿದ್ದರು. ಹಿಂದು ಉಡುಪು ಧರಿಸಿ ಹಿಂದು ಹೆಸರು ಇಟ್ಟುಕೊಂಡಿದ್ದರು. ಇವರೊಡನೆ ಒಬ್ಬ ಹಿಂದು ನರ್ತಕಿ ಹಿಂದು ವೊಬ್ಬನು ಇದ್ದರು ಇವರನ್ನು ಪೋಲೀಸರು ಹಿಡಿದು ಹಾಕಿದ್ದಾರೆ.

ಂ ಂ

ಇಸ್ರೈಲ್ ರಾಜ್ಯ

ಇಸ್ರೈಲ್ ರಾಜ್ಯಕ್ಕೆ ಮೂರು ಕಡೆಗಳಲ್ಲಿಯೂ ಶತೃಗಳಾದ ಅರಬ್ಬಿಯವರು ಇದ್ದಾರೆ. ಪ್ಯಾಲೆಸ್ಟೈನಿನಲ್ಲಿ ಅರಬ್ಬರ, ಯಾಹೂದ್ಯರ ಮತ್ತು ಕ್ರೈಶ್ಚಿಯರ ಪವಿತ್ರ ಸ್ಥಾನಗಳಿವೆ. ಈ ಮೂರು ಮತಗಳವರೂ ಶಾಂತಿಯೊಡನೆ ವರ್ತಿಸಿ ಆ ದೇಶವು ಯುದ್ಧದಿಂದ ಹಾಳಾಗದೆ ನೋಡಿಕೊಳ್ಳಬೇಕಾದದ್ದು ಕರ್ತವ್ಯವಾಗಿರುತ್ತದೆ. ಪ್ರತಿ|| ಜನಾಂಗವೂ ಸ್ವತಂತ್ರತೆಯನ್ನು ಅಪೇಕ್ಷಿಸುವ ಈ ಯುಗದಲ್ಲಿ ಯಹೂದ್ಯರು ಕೂಡ ಸ್ವತಂತ್ರ ಪ್ರೇಮಿಗಳಾಗಿರುವುದು ಸಹಜವೇ ಆಗಿದೆ.

ಂ ಂ

ಆಲೂಗಡ್ಡೆಯ ಹಿಟ್ಟು

ಸಂಯುಕ್ತ ಅಮೆರಿಕವು ಸಾಧಾರಣವಾಗಿ ವರ್ಷಂಪ್ರತಿ 15 ಮಿಲಿಯ ಪೌಂಡುಗಳ ಆಲೂಗಡ್ಡೆಯ ಹಿಟ್ಟನ್ನು ತಯಾರಿಸುತ್ತದೆ. ಈಗ ಅದನ್ನು ಹತ್ತರಷ್ಟು ಹೆಚ್ಚಾಗಿ ತಯಾರಿಸಲು ನಿರ್ದರಿಸಿದೆ. ಈ ವರ್ಷ ಈ ಯೋಜನೆಯನ್ನನುಸರಿಸಿ 150 ಮಿಲಿಯ ಪೌಂಡುಗಳ ಹಿಟ್ಟು ತಯಾರಿಸಲ್ಪಟ್ಟು ಜರ್ಮನ್ನಿಗೆ ಕಳುಹಿಸಲ್ಪಡುವದು.

Edited, Printed and Published by M S Krishna Rao at the Satyavadi Press, Chamaraj Agrahar, 'Mysore

ಹೊಸ ಬೆಳೆಯ, ಆರಿಸಿ ತೆಗೆದ, ಪರಿಶುದ್ಧವಾದ

ಶ್ರೀ 'ಓಂ' ಗುರುತಿನ ಕೇಸ

ಈ ಓಂ ಗುರುತಿನ ಕೇಸರಿ ಅತಿ ಪರಿಶುದ್ಧವಾದುದಕ್ಕೆ ಗ್ಯಾರ
ಸ್ಪೇನಿನ ಕೇಸರಿ ಗಿಡಗಳಲ್ಲಿಯ ಹೂಗಳಿಂದ ಆರಿಸಿ ತೆಗೆದುದಾಗಿ
ಸ್ಪೆಷಲ್ಲಾಗಿ ಅಮದು ಮಾಡಲ್ಪಟ್ಟಿರತಕ್ಕದ್ದು ಬಹು ಹೆ
ಸುವಾಸನೆಯಿಂದಲೂ ಕೂಡಿದುದಾಗಿದೆ. ಏನೊಂದೂ ಅಕ್ಷೇಪ
ರ್ಥಗಳೂ ಸೇರಿಲ್ಲ. ಮತ್ತು ಧಾರ್ಮಿಕವಾಗಿ ಪರಿಶುದ್ಧವಾಗಿದೆ.
ಗಳಲ್ಲಿಯೂ, ದೇವರ ಪೂಜೆಗೂ, ಔಷಧಗಳಿಗೂ, ಮತ್ತು ತಿಂಡಿಪದಾರ್ಥ
ಗೂ ಉಪಯೋಗಿಸಲ್ಪಡಲು ಅರ್ಹವಾಗಿದೆಯೆಂದು ಶಿಫಾರಸ್ಸು ಮಾಡಲಾಗಿ
1 ತೋಲಾ, 5 ತೋಲಾ, ಡಬ್ಬಗಳಲ್ಲಿಯೂ, ಚಿಲ್ಲರೆಪೊಟ್ಟಣಗಳಾಗಿಯೂ ದೊರೆಯು
ತ್ತದೆ. ಉಪಯೋಗಿಸಬೇಕಾಗಿ ವಿನಂತಿ

ವಲ್ಲಭದಾಸ್ ತೇಜ್‌ಪಾಲ್

ರಸೆ